**ಸಾಕ್ಷಿಯನ್ನು ದಿಃ 13.03.2024 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು ಮಧ್ಯಂತರ ಅರ್ಜಿಯಲ್ಲಿನ ಆದೇಶದನ್ವಯ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಬಿ ಆರ್ ವಕೀಲರಿಂದಃ**

ವಾಹನ ಸಂಖ್ಯೆ ಕೆಎ-09-ಇಜೆ-0279 ನೇದರ ಬಿ ರಿಜಿಸ್ಟರ್ ಎಕ್ಸ್ ಟ್ರ್ಯಾಕ್ಟ್ ಹಾಜರುಪಡಿಸಿದ್ದು, ನಿಪಿ. 17 ಎಂದು ಗುರುತಿಸಲಾಯಿತು. ಆದುದರಿಂದ ನಾನು ಕೋರಿರುವಂತೆ ಅರ್ಜಿಯನ್ನು ಪುರಸ್ಕರಿಸಬೇಕಾಗಿ ಪ್ರಾರ್ಥಿಸುತ್ತೇನೆ.

**ಮುಂದುವರೆದ ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಹೆಚ್ ಕೆ ಜಿ ವಕೀಲರಿಂದಃ**

9) ಸಾಕ್ಷಿಗೆ ಅಪಘಾತ ಸ್ಥಳದ ಮೂರು ಫೋಟೋಗಳನ್ನು ತೋರಿಸಿದ್ದು ಅವುಗಳನ್ನು ಸಾಕ್ಷಿ ಒಪ್ಪಿದ ಕಾರಣ ನಿಆರ್. 1 ರಿಂದ 3 ಎಂದು ಗುರುತಿಸಲಾಯಿತು. ಸದರಿ ಫೋಟೋಗಳಲ್ಲಿ ಕಂಡು ಬರುವಂತೆ ರಸ್ತೆಯ ಅಗಲ 40 ಅಡಿ ಇದೆ ಎಂದರೆ ಗೊತ್ತಿಲ್ಲ. ಸದರಿ ಫೋಟೋಗಳ ಪ್ರಕಾರ ರಸ್ತೆಯಲ್ಲಿ ಓಡಾಡುವ ವಾಹನಗಳು ಸ್ಪಷ್ಟವಾಗಿ ಕಂಡು ಬರುತ್ತವೆ ಎಂದರೆ ಸರಿ. 200 ಮೀಟರ್ ದೂರದವರೆಗೂ ವಾಹನಗಳು ಬರುವುದು ಕಂಡು ಬರುತ್ತದೆ ಮತ್ತು ರಸ್ತೆಯ ಅಕ್ಕಪಕ್ಕದಲ್ಲಿ ಗಿಡಗಂಟೆಗಳು ಬೆಳೆದಿರುವುದು ಕಂಡು ಬರುವುದಿಲ್ಲ ಎಂದರೆ ಈಗ ರಸ್ತೆಯನ್ನು ಸರಿಪಡಿಸಿದ್ದಾರೆ, ಅಪಘಾತವಾದ ಸಮಯದಲ್ಲಿ ಈ ರೀತಿ ಇರಲಿಲ್ಲ, ಗಿಡಗಂಟೆಗಳು ಬೆಳೆದಿದ್ದವು.

10) ನನಗೆ ಚಿಕಿತ್ಸೆ ನೀಡಿದ ವೈದ್ಯರ ಸಾಕ್ಷಿ ಮಾಡಿಸಲು ತೊಂದರೆ ಇದೆಯೇ ಎಂದರೆ ಈ ಬಗ್ಗೆ ವಿಚಾರಿಸಬೇಕಾಗಿದೆ. ಬಿಡುಗಡೆ ಸಾರಾಂಶ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ವಿಶ್ರಾಂತಿ ಪಡೆಯುವಂತೆ ವೈದ್ಯರು ಲಿಖಿತ ದಾಖಲೆ ನೀಡಿದ್ದಾರೆ ಆದರೆ ನನ್ನ ಬಳಿ ಈಗ ಇಲ್ಲ. 2 ನೇ ಎದುರುದಾರರು ವಾಹನ ಮಾಲೀಕರಲ್ಲದ ಕಾರಣ

ಅದರ ಮಾಲೀಕರನ್ನು ಪಾರ್ಟಿಯನ್ನಾಗಿ ಮಾಡಲು ತೊಂದರೆ ಇಲ್ಲ ಎಂದರೆ ಇಬ್ಬರೂ ನನಗೆ ಪರಿಹಾರವನ್ನು ನೀಡಬೇಕಾಗಿರುತ್ತದೆ. ವಾಹನ 2 ನೇ ಎದುರುದಾರರ ಹೆಸರಿನಲ್ಲಿಯೇ ಇರುತ್ತದೆ, ಆದ್ದರಿಂದ ಮಾಲೀಕರನ್ನು ಪಾರ್ಟಿಯನ್ನಾಗಿ ಮಾಡುವ ಅವಶ್ಯಕತೆ ಇಲ್ಲ.

11) ಅಪಘಾತವನ್ನು ಯಾರು ನೋಡಿದ್ದಾರೆಂದು ನನಗೆ ಗೊತ್ತಿಲ್ಲ. ಆದ್ದರಿಂದ ಪ್ರತ್ಯಕ್ಷ ಸಾಕ್ಷಿದಾರರನ್ನು ಸಾಕ್ಷಿ ಮಾಡಿಸಲು ಆಗುವುದಿಲ್ಲ. ನಾನು ಹಾಗೂ 1 ನೇ ಎದುರುದಾರರು ಷಾಮೀಲಾಗಿ 2 ನೇ ಎದುರುದಾರರಿಂದ ಹಣ ವಸೂಲಿ ಮಾಡಲೆಂದು ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ 1 ನೇ ಎದುರುದಾರರ ಪರ ಶ್ರೀ ಎಸ್ ಎಸ್ ಕೆ ವಕೀಲರಿಂದಃ**

ಸಮಾಯವಕಾಶ ಕೋರಿದ್ದು, ನೀಡಲಾಯಿತು.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಪ್ರಧಾನ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.